ಛೇರ್ಮನ್ :– ಕಳುಹಿಸಿಕೊಡುತ್ತಾರೆ. ಬಾಲರಾಜ್ ಅವರ ಪ್ರಶ್ನೆ ಇಂಧನ ಇಲಾಖೆಗೆ ವರ್ಗಾವಣೆಯಾಗಿದೆ. ತಾವು ವಾಣಿಜ್ಯ ಇಲಾಖೆಗೆ ಕೊಟ್ಟಿದ್ದೀರಿ, ಅದು ಇಂಧನ ಇಲಾಖೆಗೆ ವರ್ಗಾವಣೆಯಾಗಿದೆ. ಅಲ್ಲಿಂದ ಉತ್ತರ ಬರುತ್ತದೆ.

ಶ್ರೀ ಸಿ.ಎಂ. ಉದಾಸಿ :– ವರ್ಗಾವಣೆಯಾಗಿದೆ, ಅವರಿಂದ ಉತ್ತರ ಬರಬೇಕಾಗಿದೆ.

ಶ್ರೀ ಎಸ್. ಬಾಲರಾಜ್ :– ಯಾವಾಗ ಬರುತ್ತದೆ? ಇವತ್ತೇ ಬರುತ್ತದೆಯಾ?

ಛೇರ್ಮನ್ :– ಇಲ್ಲ, ಕಳುಹಿಸಿಕೊಡುತ್ತಾರೆ.

<u>ಬಹು ಗ್ರಾಮ ನೀರು ಸರಬರಾಜು ಯೋಜನೆ ಹಾಗೂ ಒಳಚರಂಡಿ ಯೋಜನೆಗಳು:</u>

374 (2493) ಶ್ರೀ ಸಿಂಧೂರ ಜಿ. ರಾಜಶೇಖರ (ಶಿಗ್ಗಾಂವ್) :– ಮಾನ್ಯ ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸವಣೂರು ತಾಲ್ಲೂಕು ಹುರುಳಿಕೊಪ್ಪಿ ಬಹುಗ್ರಾಮ ನೀರು ಸರಬರಾಜು ಯೋಜನೆ ಇಲ್ಲಿಯವರೆಗೂ ಅನುಷ್ಠಾನಗೊಳ್ಳದೇ ಇರುವುದು ಸರ್ಕಾರದ ಗಮನದಲ್ಲಿದೆಯೇ;

ಆ) ಹಾಗಿದ್ದಲ್ಲಿ, ಜಿಲ್ಲಾ ನೆರೆವು ಘಟಕ, ಜಲ ನಿರ್ಮಲ ಯೋಜನೆ, ಹಾವೇರಿ ಇವರು ಪರಿಷ್ಕೃತ ಅಂದಾಜು ಪತ್ರಿಕೆ ತಯಾರಿಸಿ ಕರ್ನಾಟಕ ಗ್ರಾಮೀಣ ನೀರು ಸರಬರಾಜು ಸಂಸ್ಥೆ, ಬೆಂಗಳೂರು ಇವರಿಗೆ ಕಳುಹಿಸಿರುವುದು ನಿಜವಲ್ಲವೇ;

ಇ) ಹಾಗಿದ್ದಲ್ಲಿ, ಇಲ್ಲಿಯವರೆಗೂ ಇವರಿಂದ ಮುಂದಿನ ಕಾಮಗಾರಿ ಪ್ರಕ್ರಿಯೆಗೆ ಅನುಮೋದನೆ ದೊರೆಯದೆ ಕಾಮಗಾರಿ ವಿಳಂಬಕ್ಕೆ ಕಾರಣವಾಗಿರುವುದು ಸರ್ಕಾರದ ಗಮನದಲ್ಲಿದೆಯೇ;

ಈ) ಬಂದಿದ್ದಲ್ಲಿ ತೀವ್ರಗತಿಯಲ್ಲಿ ಕಾಮಗಾರಿ ಚಾಲನೆಗೆ ಸರ್ಕಾರ ಯಾವ ಕ್ರಮಕೈಗೊಳ್ಳುತ್ತದೆ;

ಉ) ಶಿಗ್ಗಾಂವ್ ಸವಣೂರು ತಾಲ್ಲೂಕುಗಳಲ್ಲಿ ಬರುವ ಯಾವ ದೊಡ್ಡ ಗ್ರಾಮಗಳಿಗೆ ಒಳಚರಂಡಿ ವ್ಯವಸ್ಥೆ ಕಲ್ಪಿಸಲು ಸರ್ಕಾರ ಯೋಜನೆ ಹಾಕಿಕೊಂಡಿದೆ;

ಊ) ಯೋಜನೆ ಕಲ್ಪಿಸಲದೇ ಇದ್ದಲ್ಲಿ ಸವಣೂರು ತಾಲ್ಲೂಕು ಕಾರಡಗಿ, ತವರಮೆಳ್ಳಿಹಳ್ಳಿ ಹಾಗೂ ಶಿಗ್ಗಾಂವ್ ತಾಲ್ಲೂಕು ದುಂಢಶಿ, ಅಂದಲಗಿ, ತಿಮ್ಮಾಪುರ, ಹೊಸೂರು–ಯತ್ನಳ್ಳಿ ಗ್ರಾಮಗಳನ್ನು ಆಯ್ಕೆ ಮಾಡಿ ಒಳಚರಂಡಿ ಯೋಜನೆ ವ್ಯವಸ್ಥೆ ಕಲ್ಪಿಸಲು ಸರ್ಕಾರ ಅನುದಾನ ಬಿಡುಗಡೆಗೊಳಿಸಿ ಯಾವಾಗ ಕ್ರಮ ಕೈಗೊಳ್ಳುತ್ತದೆ?

ಶ್ರೀ ಎಸ್.ಎ. ರವೀಂದ್ರನಾಥ್ (ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಮತ್ತು ಸಕ್ಕರೆ ಸಚಿವರು)

ಅ) ಹೌದು

ಆ) ಹೌದು

ಇ) ಹೌದು

ಈ) ಹುರುಳಿಕೊಪ್ಪಿ ಬಹುಗ್ರಾಮ ನೀರು ಸರಬರಾಜು ಯೋಜನೆಯನ್ನು ಅನುಷ್ಠಾನಗೊಳಿಸಲು ವಿಶ್ವಬ್ಯಾಂಕ್‌ನಿಂದ ಮರುಟೆಂಡರ್ ಮಾಡಲು ನಿರಾಕ್ಷೇಪಣೆ ಪಡೆಯಲು ವಿಶ್ವಬ್ಯಾಂಕ್ ನವದೆಹಲಿ ಕಛೇರಿಗೆ ದಿನಾಂಕ : 30–3–2007 ರಂದು ಪರಿಷ್ಕೃತ ಯೋಜನಾ ವರದಿಯನ್ನು ಕಳುಹಿಸಲಾಗಿದೆ. ವಿಶ್ವಬ್ಯಾಂಕ್‌ನಿಂದ ಅನುಮೋದನೆ ಪಡೆದ ನಂತರ ರಾಜ್ಯ ಸರ್ಕಾರದಿಂದ ಹೆಚ್ಚುವರಿ ಅನುದಾನ ಬಿಡುಗಡೆಯಾದ ಬಳಿಕ ಟೆಂಡರ್ ಕರೆಯಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಉ) ಸದ್ಯಕ್ಕೆ ಸರ್ಕಾರದ ಮುಂದೆ ಈ ಕುರಿತು ಯಾವುದೇ ಪ್ರಸ್ತಾವನೆಗಳು ಇರುವುದಿಲ್ಲ.

ಊ) ಆದಾಗ್ಯೂ ಜಲನಿರ್ಮಲ ಯೋಜನೆಯಡಿ ಶಿಗ್ಗಾಂವ್ ತಾಲ್ಲೂಕಿನ ದುಂಢಶಿ ಗ್ರಾಮದಲ್ಲಿ ಸಮಗ್ರ ತಾಂಡ ಅಭಿವೃದ್ಧಿ ಯೋಜನೆಯಡಿ ರೂ. 3.68 ಲಕ್ಷಗಳ ವೆಚ್ಚದಲ್ಲಿ ರಸ್ತೆ ಮತ್ತು ನೈರ್ಮಲ್ಯ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗಿದೆ.

ಶಿಗ್ಗಾಂವ್ ತಾಲ್ಲೂಕಿನ ಅಂದಲಗಿ ಗ್ರಾಮವನ್ನು ಜಲ ನಿರ್ಮಲ ಯೋಜನೆಯ ಮೊದಲನೆ ತಂಡದಲ್ಲಿ ರೂ. 22.08 ಲಕ್ಷದ ವೆಚ್ಚದಲ್ಲಿ ರಸ್ತೆ ಮತ್ತು ನೈರ್ಮಲ್ಯ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದ್ದು, ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ.

ತಿಮ್ಮಾಪುರ ಗ್ರಾಮವನ್ನು ಜಲ ನಿರ್ಮಲ ಯೋಜನೆಯಡಿ ಕೈಗೆತ್ತಿಕೊಂಡಿರುವುದಿಲ್ಲ.

ಹೊಸೂರು ಗ್ರಾಮ ಪಂಚಾಯತಿಯ ಯತ್ನಳ್ಳಿ ಗ್ರಾಮವನ್ನು ಸಮಗ್ರ ತಾಂಡ ಅಭಿವೃದ್ಧಿ ಯೋಜನೆಯಡಿ ರೂ. 4.52 ಲಕ್ಷದ ವೆಚ್ಚದಲ್ಲಿ ರಸ್ತೆ ಮತ್ತು ನೈರ್ಮಲ್ಯ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು ಸಮುದಾಯ ವಂತಿಕೆ ಸಂಗ್ರಹಣೆಯಾಗದ ಕಾರಣ ರಸ್ತೆ ಮತ್ತು ನೈರ್ಮಲ್ಯ ಕಾಮಗಾರಿಗಳನ್ನು ಕೈ ಬಿಡಲಾಗಿದೆ. ಮೇಲ್ಕಂಡ ಗ್ರಾಮಗಳಲ್ಲಿ ಜಲ ನಿರ್ಮಲ ಯೋಜನೆಯಡಿ ಒಳಚರಂಡಿ ವ್ಯವಸ್ಥೆಯನ್ನು ಕೈಗೆತ್ತಿಕೊಳ್ಳಲು ಪ್ರಸ್ತಾಪಿಸಿರುವುದಿಲ್ಲ.

ಶ್ರೀ ಸಿಂಧೂರ ಜಿ. ರಾಜಶೇಖರ :– ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ನನ್ನ ಮತಕ್ಷೇತ್ರದಲ್ಲಿ 2004 ರಲ್ಲಿ ಪ್ರಾರಂಭವಾಗಿತ್ತು. ಕಾಮಗಾರಿ ಕೆಲಸಗಳು ತಡವಾಗಿದೆ ಎಂದು ಕೇಳಿರುವಂತಹ ಪ್ರಶ್ನೆಗೆ ಹೌದು ಎಂದು ಹೇಳಿದ್ದಾರೆ. ಈ ಕಾಮಗಾರಿಯನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ಎಂದು ಕೇಳಿರುವಂತಹ ಪ್ರಶ್ನೆಗೆ ದಿನಾಂಕ 30 ರಂದು ಕಳೆದ ಶುಕ್ರವಾರ ದೆಹಲಿಗೆ ಮಂಜೂರಾತಿಗಾಗಿ ಕಳುಹಿಸಿದ್ದಾರೆ. 2004 ನೇ ಸಾಲಿನ

ಕೆಲಸ 2007 ನೇ ಸಾಲಿನಲ್ಲಿ ಕೂಡ ಪ್ರಾರಂಭವಾಗದಿದ್ದರೆ, ನಾವು ಗ್ರಾಮೀಣ ಮಟ್ಟದಲ್ಲಿ ಯಾವರೀತಿಯಾಗಿ ನೀರನ್ನು ಪೂರೈಕೆ ಮಾಡುವುದಕ್ಕಾಗುತ್ತದೆ? ನಮ್ಮ ಪರಿಸ್ಥಿತಿ ಯಾವರೀತಿ ಇದೆ ಎಂದರೆ ನೀರಲ್ಲಿ ನಿಂತ ಅಗಸ ನೀರಡಿಕೆಯಿಂದ ಸತ್ತ ಎಂದ ಹಾಗೆ ನಮ್ಮ ತಾಲ್ಲೂಕಿನಲ್ಲಿ ಸಾಕಷ್ಟು ದೊಡ್ಡ ಪ್ರಮಾಣದಲ್ಲಿ ವರದಾ ನದಿ ಹರಿಯುತ್ತಿದ್ದರೂ ಕೂಡ ನಾವು ಈ ಒಂದು ಯೋಜನೆಯಿಂದ ವಂಚಿತರಾಗಿದ್ದೇವೆ. ಆದುದರಿಂದ ಸರ್ಕಾರ ಯಾವಾಗ ಈ ಕಾಮಗಾರಿಯನ್ನು ಮುಗಿಸುತ್ತದೆ ಎಂದು ಹೇಳಬೇಕು.

ಶ್ರೀ ಸಿ.ಎಂ. ಉದಾಸಿ :– ಮಾನ್ಯ ಅಧ್ಯಕ್ಷರೆ, ಈ ಕಾಮಗಾರಿಗೆ ಶೇಕಡ 75 ರಷ್ಟು ಅಂದಾಜಿನ ಬೆಲೆಗೆ ಟೆಂಡರ್ ಹಾಕಿದ್ದರಿಂದ ಇದು ಮಂಜೂರಾತಿಗೆ ಬರಲಿಲ್ಲ. ಆದುದರಿಂದ ಅದನ್ನು ಮರುಪರಿಶೀಲನೆ ಮಾಡಿ 70 LPCD ಬದಲಾಗಿ 50 LPCD ಗೆ ಬದಲಾವಣೆ ಮಾಡಿ ಈ ಯೋಜನೆಯಲ್ಲಿ 14 ಹಳ್ಳಿಗಳಿಗೆ ಮಂಜೂರಾತಿ ಕಳುಹಿಸಿದೆ. ಹಾವೇರಿ ಜಿಲ್ಲೆಯಲ್ಲಿ 9 ಯೋಜನೆಗಳಲ್ಲಿ 7 ಯೋಜನೆಗಳಿಗೆ ಈಗಾಗಲೇ ಟೆಂಡರ್ ಕರೆದಿದೆ. ಇನ್ನು ಎರಡು ಯೋಜನೆಗಳು ಮಾತ್ರ ಉಳಿದಿವೆ. ಅವುಗಳು ಹುರುಳಿಕೊಪ್ಪಿ ಮತ್ತು ಹೊಸೂರ ಉಳಿದಿದೆ. ಇವೆರಡನ್ನು ಅತೀ ಶೀಘ್ರದಲ್ಲಿ ಮಂಜೂರಾತಿ ಮಾಡಿಸಿ ಅಲ್ಲಿ ಕೆಲಸವನ್ನು ಪ್ರಾರಂಭ ಮಾಡಿಸುತ್ತೇವೆ.

ಶ್ರೀ ಸಿಂಧೂರ ಜಿ. ರಾಜಶೇಖರ :– ಮಾನ್ಯ ಅಧ್ಯಕ್ಷರೆ, ಶಿಗ್ಗಾಂವ್ ತಾಲ್ಲೂಕಿನಲ್ಲಿ ಬರುವ ಯಾವ ದೊಡ್ಡ ಗ್ರಾಮಗಳಿಗೆ ಒಳಚರಂಡಿ ವ್ಯವಸ್ಥೆ ಕಲ್ಪಿಸಲು ಸರ್ಕಾರ ಯೋಜನೆ ಹಾಕಿಕೊಂಡಿದೆ ಎಂದು ಕೇಳಿರುವಂತಹ ಪ್ರಶ್ನೆಗೆ ಈ ಬಗ್ಗೆ ಪ್ರಸ್ತಾವನೆ ಬಂದಿಲ್ಲವೆಂದು ಸರ್ಕಾರದಿಂದ ಉತ್ತರ ಬಂದಿದೆ. ಆದರೆ ಅಲ್ಲಿನ ಸ್ಥಳೀಯ ಅಧಿಕಾರಿಗಳನ್ನು ಕೇಳಿದರೆ, ಅವರು ಪ್ರಸ್ತಾವನೆಯನ್ನು ಸಾಕಷ್ಟು ಕಳುಹಿಸಿದ್ದೇವೆ, ಆದರೆ ಅದರ ಬಗ್ಗೆ ಏನೂ ಆದೇಶ ಬಂದಿಲ್ಲವೆಂದು ಹೇಳುತ್ತಿದ್ದಾರೆ. ಆದುದರಿಂದ ಸರ್ಕಾರ ದಯವಿಟ್ಟು ಈ ಯೋಜನೆಯಲ್ಲಿ ವಂಚಿತವಾಗಿರುವಂತಹ ನಮ್ಮ ಕ್ಷೇತ್ರಕ್ಕೆ ಸರಿಪಡಿಸಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಎಂ. ಉದಾಸಿ :– ಅದರ ಬಗ್ಗೆ ಬೇಡಿಕೆಗಳು ಬಂದಿದ್ದರೆ, ಮನ್ಯ ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತಂದು ಶೀಘ್ರದಲ್ಲಿ ಕೆಲಸ ಮಾಡಿಸಿಕೊಡುತ್ತೇವೆ.

1590 ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ) :– ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೈದ್ರಾಬಾದ್ ಕರ್ನಾಟಕದ ವ್ಯಾಪ್ತಿಯ ಜಿಲ್ಲೆಗಳಲ್ಲಿ ಚಾಲನೆಯಲ್ಲಿರುವ ನೀರಾವರಿ ಯೋಜನೆಗಳು ಯಾವುವು;